# ಸಾಹಿತಿಯಾಗಿ ಸ್ವಾಮಿ ವಿವೇಕಾನಂದರು

ಡಾ.ಸಿ.ಪಿ.ಕೃಷ್ಣಕುಮಾರ್

ಸ್ವಾಮಿ ವಿವೇಕಾನಂದರು ಆಡಿರುವ ಮಾತೆಲ್ಲ ಧಮನಿ ಧಮನಿಗಳಲ್ಲಿ ಉತ್ಸಾಹ ಸ್ಫೂರ್ತಿಗಳನ್ನು ಹರಿಸಬಲ್ಲ "ಶಕ್ತಿಸಾಹಿತ್ಯ" (Literature of Power) ಎಂದಿರುವ ಡಾ.ಸಿ.ಪಿ.ಕೃಷ್ಣಕುಮಾರರು ಕನ್ನಡದ ಹೆಸರಾಂತ ಸಾಹಿತಿಗಳೂ ಹಾಗೂ ವಿವೇಕಾನಂದ ಸಾಹಿತ್ಯದಲ್ಲಿ ಆಳವಾಗಿ ಅಧ್ಯಯನ ನಡೆಸಿದವರೂ ಆಗಿರುತ್ತಾರೆ.

"ನವಯುಗಾಚಾರ್ಯ", "ಆಧುನಿಕ ಭರತಖಂಡದ ನಿರ್ಮಾಪಕ" ಮುಂತಾದ ಅಭಿಧಾನಗಳಿಗೆ ಪಾತ್ರರಾದ ಸ್ವಾಮಿ ವಿವೇಕಾನಂದರ ವ್ಯಕ್ತಿತ್ವ ಅನೇಕಮುಖರಂಜಿತವಾದುದು. ಅವರು ಸಾಹಿತಿ, ಕವಿ, ಕಲಾವಿದ ಮತ್ತು ಕಲಾವಿಮರ್ಶಕರು ಕೂಡ. ಗದ್ಯ, ಪದ್ಯಗಳೆರಡರಲ್ಲೂ ಅವರು ಬರೆದಿದ್ದಾರೆ. (ಪದ್ಯದ ಪ್ರಮಾಣ ಅತ್ಯಲ್ಪ, ಗದ್ಯದ ಬಹುಭಾಗ ಮೂಲತಃ ಭಾಷಣ ಸಮುದಾಯ.) ತಮ್ಮ ಕವನಗಳಲ್ಲೇನೊ ಸ್ವಾಮೀಜಿ ಸಹಜ ಕವಿಯಾಗಿ ಕಾಣಿಸಿಕೊಳ್ಳುತ್ತಾರೆ; ಗದ್ಯದಲ್ಲಿ ಅವರನ್ನು ಸಾಹಿತಿ ಎಂದು ಕರೆಯಬಹುದೇ ಎಂಬ ಪ್ರಶ್ನೆ ಮೂಡಬಹುದು. ಆದರೆ ಅದು ಮೂಡಿದಂತೆಯೇ ಮುಳುಗಿಹೋಗುತ್ತದೆ!

ಸ್ವಾಮೀಜಿ ಋಷಿಮಾತ್ರವಲ್ಲ, ರಸಋಷಿ. ನಾನೃಷಿಃ ಕುರುತೇ ಕಾವ್ಯಂ (ಋಷಿಯಲ್ಲದವನು ಕವಿಯಾಗಲಾರ) ಎಂಬ ಮೌಲಿಕವಾದ ಉಕ್ತಿಯ ಆಧಾರದಿಂದ ಪರಿಶೀಲಿಸಿದಾಗ, ಆ ನರಮಹರ್ಷಿಯ ಉದ್ಗಾರವೆಲ್ಲ ಸಾಹಿತ್ಯ, ಕಾವ್ಯ ಎನ್ನಬೇಕಾಗುತ್ತದೆ! "ಅನುಭವಿಸಿ ಹೇಳಿದ್ದು ಸಾಹಿತ್ಯ, ಉಳಿದದ್ದೆಲ್ಲ ಬರಿಯ ವರದಿ" (—ಕುವೆಂಪು) ಎಂಬ ಹೇಳಿಕೆಯ ಬೆಳಕಿನಲ್ಲಿ ನೋಡಿದಾಗ, ಸ್ವಾಮೀಜಿ ಆಡಿದ್ದೆಲ್ಲ ಅನುಭವದ, ಅಷ್ಟೇ ಅಲ್ಲ, ಅನುಭಾವದ ಆಳದಿಂದ ಹೊಮ್ಮಿ ಬಂದಿರುವುದು ಗೋಚರಿಸುತ್ತದೆ. ಅದು ಬಿಲ್ಲಿನಿಂದ ಬಿಟ್ಟ ಬಾಣದಂತೆ ಹೃದಯದಿಂದ ಚಿಮ್ಮಿ ನೇರವಾಗಿ ಹೃದಯವನ್ನು ತಾಗುತ್ತದೆ.

ಕಾವ್ಯ ಎನ್ನುವುದೊಂದು ಆವೇಶ (Passion), ಸತ್ಯ ಸೌಂದರ್ಯ ಶಕ್ತಿಗಳನ್ನು ಕುರಿತ ಆವೇಶ ಎನ್ನುತ್ತಾನೆ, ಒಬ್ಬ ಪಾಶ್ಚಾತ್ಯ ವಿಮರ್ಶಕ. ವಿವೇಕಾನಂದವಾಣಿಯಲ್ಲಿ ಆ ಆವೇಶವನ್ನು, ಉತ್ಕಟತೆಯನ್ನು ಅನುಭವಿಸುತ್ತೇವೆ. ಅದು ಅಕ್ಷರಶಃ "ಶಕ್ತಿಸಾಹಿತ್ಯ" (Literature of Power). ಅದರಲ್ಲಿ ಅತಿಶಯ ವಿದ್ವತ್ತಿದೆ. ಆದರೆ ಅಷ್ಟರಿಂದಲೇ ಏನು ಪ್ರಯೋಜನ? ವಿದ್ವತ್ತಿಗಿಂತ ಮಿಗಿಲಾಗಿ ವಿದ್ಯುತ್ತಿದೆ ಎಂಬುದು ಮಹತ್ತ್ವದ ಸಂಗತಿ. "ನಾನು ವಿವೇಕವಾಣಿಯನ್ನು, ನನ್ನ ದೇಹಾದ್ಯಂತ ಒಂದು ರೋಮಾಂಚನವನ್ನನುಭವಿಸದೆ ಸ್ಪರ್ಶಿಸಲಾರೆ!" ಎನ್ನುತ್ತಾರೆ, ರೋಮೈ ರೋಲಾ. ಸ್ವಾಮೀಜಿಯ ಒಂದೊಂದು ನುಡಿಯೂ ಸಿಡಿಲಿನ ಕಿಡಿ; ಮಿಂಚಿನ ಕುಡಿ!

ಸಾಹಿತ್ಯ ಶಬ್ದವನ್ನು "ಸ-ಹಿತ" (ಹಿತದಿಂದ ಕೂಡಿದ್ದು) ಎಂದು ನಿಷ್ಪತ್ತಿಗೊಳಿಸುವುದೂ ಉಂಟಷ್ಟೆ. ಆತ್ಮನೋ ಮೋಕ್ಷಾರ್ಥಂ ಜಗದ್ಧಿತಾಯ ಚ—"ಸ್ವಂತ ಮೋಕ್ಷ ಮತ್ತು ಜಗತ್ತಿನ ಹಿತಕ್ಕಾಗಿ" ಎಂಬ ಧ್ಯೇಯದ ಮೂರ್ತರೂಪವಾದ ಸ್ವಾಮೀಜಿಯ ಬರಹ, ಭಾಷಣಗಳಲ್ಲಿ ಸಾಹಿತ್ಯವಿಲ್ಲದಿದ್ದರೆ ಮತ್ತೆಲ್ಲಿ ತಾನೆ ಅದನ್ನು ಹುಡುಕಬೇಕು? ಲೋಕಸಂಗ್ರಹ—ಅದೇ ಅವರ ಸಮಸ್ತ ಜೀವನ, ಸಾಧನೆಗಳ ಅಂತಸ್ಸೂತ್ರ ಮತ್ತು ಅಂತಃಸ್ರೋತ! ಅಲ್ಲಿ ಸಾಹಿತ್ಯ ನಿರ್ಝರಿಣಿಯೂ ಇದ್ದರೆ ಅಚ್ಚರಿಯೇನು?

ಸ್ವಾಮಿ ವಿವೇಕಾನಂದರ ಬರಹ, ಭಾಷಣಗಳಲ್ಲಿ ಸಾಹಿತ್ಯವಿಲ್ಲದಿದ್ದರೆ ಮತ್ತೆಲ್ಲಿ ತಾನೆ ಅದನ್ನು ಹುಡುಕಬೇಕು?

ಸ್ವಾಮಿ ವಿವೇಕಾನಂದರ ವಾಗ್ಧಾರೆಯಲ್ಲಿ ನಾವು ಎದುರುಗೊಳ್ಳುವ ಜೀವಲಕ್ಷಣಗಳು ಮೂರು : ಸರಳತೆ, ಸ್ಪಷ್ಟತೆ ಮತ್ತು ಶಕ್ತಿಪೂರ್ಣತೆ. ಶ್ರೀರಾಮಕೃಷ್ಣ ಪರಮಹಂಸರದು ಉದ್ದಕ್ಕೂ ಉಪಮೆ, ದೃಷ್ಟಾಂತಗಳನ್ನು ಎರಚುವ ಪ್ರಾಸಾದಿಕ ವಚನಾವಳಿ; ವಿವೇಕಾನಂದರಲ್ಲಾದರೊ ನಾವು ನೋಡುವುದು ವಿಶೇಷವಾಗಿ ರೂಪಕ ಘಟಿತವಾದ ಓಜಃಪೂರ್ಣ ಶೈಲಿಯನ್ನು; ಕಾವ್ಯಾತ್ಮಕ ರೀತಿಯನ್ನು. ಅದರ ಅಸೀಮ ಪ್ರಭಾವಕ್ಕೆ ಸಾಕ್ಷ್ಯಗಳು ವಿಪುಲ.

ಸ್ವಾಮೀಜಿಯವರ ಚಿಕಾಗೋ ಭಾಷಣವನ್ನು ಕುವೆಂಪು "ಪ್ರಪಂಚದ ಸ್ವಮತ ಭ್ರಾಂತಿಯ ಎಡೆಗೆ ಭರತಖಂಡವು ಹೊಡೆದ ಮೊದಲ ಸಿಡಿಲ್‌ಗುಂಡು, ಸ್ವಾಮಿ ವಿವೇಕಾನಂದರು ಚಿಕಾಗೋ ಸರ್ವಧರ್ಮಸಮ್ಮೇಳನದಲ್ಲಿ ಮಾಡಿದ ದಿವ್ಯೋಜ್ಜ್ವಲವಾದ ಭಾಷಣ!" ಎಂದು ಬಣ್ಣಿಸುತ್ತಾರೆ. ಅದರ ಪ್ರಥಮ ಸಂಬೋಧನೆಯ ಬಗೆಗೆ ಅವರು ಬರೆಯುತ್ತಾರೆ: " 'ಅಮೆರಿಕ ದೇಶದ ಭ್ರಾತೃ ಭಗಿನಿಯರೆ!' ವಾಚ್ಯವಾಗಿ ನೋಡಿದರೆ ಅತಿ ಸಾಮಾನ್ಯವಾಗಿ ಅತ್ಯಲ್ಪವಾಗಿ ತೋರುವ ಆ ಸಂಬೋಧನೆ ಚಿಚ್ಛಕ್ತಿಯ ಎಂತಹ ವಿದ್ಯುತ್ ಪ್ರವಾಹವನ್ನು ಆಲಿಸಿದವರ ಹೃದಯಗಳಲ್ಲಿ ಪ್ರಚೋದಿಸಿತೆಂಬುದನ್ನು ಸಾಕ್ಷಿಗಳಿಂದಲೇ ಅರಿಯಬೇಕು, ಅನುಭವಿಸಬೇಕು. ಅಸೀಮವಾಗಿದೆ ಅದರ 'ಧ್ವನಿಶಕ್ತಿ'! ಊದಿದನಿತೂ ಉಜ್ಜ್ವಲವಾಗುವ ಬೆಂಕಿಯಂತೆ ಭಾವಿಸಿದನಿತೂ ನಿರ್ದಿಗಂತವಾಗುತ್ತದೆ ಅದರ ವ್ಯಾಪ್ತಿ; ನಿಶ್ಶಿಖರವೆಂಬಂತೆ ಏರುತ್ತದೆ ಅದರ ಉನ್ನತ ದೀಪ್ತಿ." ಅದೇ ಭಾಷಣವನ್ನು ಕುರಿತು ಅನಿಬೆಸೆಂಟರ ಹೇಳಿಕೆಯಿದು: "ಸ್ವಾಮೀಜಿ ಮಾತನಾಡಲು ಎದ್ದು ನಿಂತರು. ಅದೇ ಗಾಂಭೀರ್ಯ, ಅದೇ ಪ್ರತಿಭೆ, ಅದೇ ಶಕ್ತಿ ಎಲ್ಲವೂ ಇದ್ದುವು.

ಆದರೆ ಆತನು ತಂದ ಆ ಧರ್ಮಸಂದೇಶದ ಸೌಂದರ್ಯದ ಸಮ್ಮುಖದಲ್ಲಿ, ಆ ಅಪ್ರತಿದ್ವಂದ್ವಿಯಾದ ಅತುಲನೀಯವಾದ ಪ್ರಾಚ್ಯ ಋಷಿಗಳ ಆಧ್ಯಾತ್ಮಿಕ ಸಂದೇಶದ ಮಹಿಮೆಯ ಸಮ್ಮುಖದಲ್ಲಿ, ಅವುಗಳೆಲ್ಲ ವಿನಮ್ರವಾಗಿದ್ದವು. ಅಲ್ಲಿ ನೆರೆದಿದ್ದ ಜನ ವಾರಿಧಿ ಮಂತ್ರಮುಗ್ಧವಾದಂತೆ ಆತನ ಕೊರಳ ದನಿಯನ್ನು ಕೇಳಲು ನೀರವವಾಗಿತ್ತು... ಒಂದು ಮಾತನ್ನೂ ಹಾಳಾಗಗೊಡಲಿಲ್ಲ; ಒಂದು ಸ್ವರವೂ ಮೋಘವಾಗಲಿಲ್ಲ."

ಸ್ವಾಮೀಜಿಯ ಸಾಹಿತ್ಯಗುಣಸಂಪನ್ನವಾದ ಭಾಷಣ, ಲೇಖನಗಳಿಂದ ಕೆಲವು ಪ್ರಾತಿನಿಧಿಕ ಭಾಗಗಳನ್ನು ಈಗ ಉದ್ಧರಿಸಬಹುದು. ಹಳೆಯದನ್ನು ಬಿಟ್ಟು, ನವದಿಗಂತದತ್ತ ಮುನ್ನಡೆಯಲು ಅವರು ನೀಡುವ ಆಹ್ವಾನ ಎಷ್ಟು ಪರಿಣಾಮಕಾರಿಯಾಗಿದೆ!—

**"ಓ ಮಾನವ, ಅತೀತದ ಪೂಜೆಯಿಂದ ಪ್ರತ್ಯಕ್ಷದ ಪೂಜೆಗೆ, ನಿನಗಿದೋ ಆಹ್ವಾನ! ಹೋದ ದುಃಖದಿಂದ ಬರುವ ಸುಖಕ್ಕೆ, ನಿನಗಿದೋ ಆಹ್ವಾನ! ಗತಾನುಶೋಚನೆಯಿಂದ ಆಧುನಿಕ ನವ ಪ್ರಯತ್ನಕ್ಕೆ ನಿನಗಿದೋ ಆಹ್ವಾನ! ಲುಪ್ತ ಪಂಥದ ಪುನರುದ್ಧಾರ ಸಾಹಸದ ವೃಥಾ ಶಕ್ತಿಕ್ಷಯದಿಂದ ಸದ್ಯೋನಿರ್ಮಿತ ವಿಶಾಲ ಸನ್ನಿಕಟ ಪಥಕ್ಕೆ, ನಿನಗಿದೋ ಆಹ್ವಾನ! ಓ ಬುದ್ಧಿಮಾನ್ ಮಾನವಾ, ಇದನ್ನು ತಿಳಿ, ಸಿದ್ಧನಾಗು, ಪ್ರಬುದ್ಧನಾಗು!**

"ನಾವು ಪ್ರಭುವಿನ ದಾಸರು, ಪ್ರಭುವಿನ ಪುತ್ರರು; ಪ್ರಭುವಿನ ಲೀಲೆಗೆ ಸಹಾಯಕರು ಎಂಬುದನ್ನು ತಿಳಿ. ವಿಶ್ವಾಸಹೃದಯದಿಂದ ದೃಢಭಾವಧಾರಿಯಾಗಿ ಕಾರ್ಯಕ್ಷೇತ್ರಕ್ಕೆ ಧುಮುಕು! ನಿರ್ಭರತೆಯಿಂದ ಧುಮುಕು!"

ಹೀಗೆಯೇ, ಧಮನಿ ಧಮನಿಗಳಲ್ಲಿ ಉತ್ಸಾಹ ಸ್ಫೂರ್ತಿಗಳನ್ನು ಹರಿಸಬಲ್ಲ ಈ ವೀರಮಂತ್ರವನ್ನು ಪರಿಭಾವಿಸಿ: "ನಮ್ಮ ನರಗಳಿಗೆ ವಜ್ರಸಾಣೆಯಾಗಲಿ; ನಮಗೀಗ ಬೇಕಾದುದು ಕಬ್ಬಿಣದ ಮಾಂಸಖಂಡಗಳು, ಉಕ್ಕಿನ ನರಗಳು. ಬಹುಕಾಲದಿಂದಲೂ ನಾವು ಕಣ್ಣೀರು ಕರೆದಿದ್ದೇವೆ. ಇನ್ನು ಸಾಕು, ಅದು ಬೇಡ. ಮೇಲೆದ್ದು ನಿಂತು ಪುರುಷಸಿಂಹರಾಗಿ; ನಮಗೆ ಬೇಕು ವೀರಧರ್ಮ, ವೀರನಿರ್ಮಾಪಕಧರ್ಮ."

ಭಾರತಮಾತೆ ಸುದೀರ್ಘ ನಿದ್ರೆಯಿಂದ ಎಚ್ಚೆತ್ತು ಅದಮ್ಯಳಾಗಿ ನಿಲ್ಲುತ್ತಿರುವ ಚಿತ್ರವನ್ನು ವಿವೇಕಾನಂದರು ಭಾವನಿರ್ಭರರಾಗಿ, ಪ್ರೋಜ್ವಲವಾಗಿ ಕೊಡುವ ಪರಿಚಯ: "ಸುದೀರ್ಘ ರಾತ್ರಿ ಕಡೆಗಿಂದು ಕೊನೆಗಾಣುತ್ತಿದೆ. ಬಹುಕಾಲದ ಕೋಪತಾಪಗಳು ಕಡೆಗಿಂದು ಮಾಯವಾಗುತ್ತಲಿವೆ. ಇದುವರೆಗೆ ಶವದಂತೆ ಬಿದ್ದಿದ್ದ ಶರೀರವಿಂದು ಸಚೇತನವಾಗುತ್ತಿದೆ. ಅದೋ ಕಿವಿಗೊಡಿ; ತೂರ್ಯವಾಣಿಯೊಂದು ಕೇಳಿಬರುತ್ತಿದೆ—ಬಹುಪುರಾತನಕಾಲದ ಇತಿಹಾಸ ಗರ್ಭದಿಂದ ಹೊಮ್ಮಿ, ಪರ್ವತಪರ್ವತ ಶಿಖರಗಳಿಂದ ಮರುದನಿಯಾಗಿ ಚಿಮ್ಮಿ, ಅರಣ್ಯಾರಣ್ಯ ಕಂದರಕಂದರಗಳಲ್ಲಿ ಸಂಚರಿಸಿ, ಬರಬರುತ್ತ ಪ್ರಬಲವಾಗಿ, ಬಂದಂತೆಲ್ಲ ಅಪ್ರತಿಹತವಾಗಿ, ನಮ್ಮೀ ಪುಣ್ಯ ಭೂಮಿಯನ್ನು ನಿದ್ದೆಯಿಂದೊಡೆದೆಬ್ಬಿಸಿ, ಜ್ಞಾನ ಭಕ್ತಿ ಕರ್ಮ ವೈರಾಗ್ಯ ಸೇವಾತತ್ತ್ವಗಳನ್ನು ಉಚ್ಚ ಕಂಠದಿಂದ ಸಾರುವ ತೂರ್ಯವಾಣಿಯೊಂದು ಕೇಳಿಬರುತ್ತಿದೆ. ಹಿಮಾಲಯಗಳಿಂದ ಬೀಸಿಬರುವ ಪುಣ್ಯ ಸಮೀರಣನಂತೆ, ನಿರ್ಜೀವವಾದಂತಿದ್ದ ಅಸ್ಥಿಮಾಂಸಗಳಿಗೆ ಜೀವದಾನ ಮಾಡುತ್ತಿದೆ; ಜಡನಿದ್ದೆಯನ್ನು ಪರಿಹರಿಸುತ್ತಿದೆ; ಕಾರ್ಯೋತ್ಸಾಹ ಸ್ಥೈರ್ಯಧೈರ್ಯಗಳನ್ನು ಉದ್ರೇಕಿಸುತ್ತಿದೆ. ಕುರುಡರಿಗೆ ಕಾಣದು; ಮೂರ್ಖರಿಗೆ ತಿಳಿಯದು. ನಮ್ಮ ಭಾರತಭೂಮಿ ಯುಗಯುಗಗಳ ನಿದ್ರೆಯಿಂದ ಮೇಲೇಳುತ್ತಿದೆ. ಆಕೆಯನ್ನು ಇನ್ನಾರೂ ತಡೆಯಬಲ್ಲವರಿಲ್ಲ; ಇನ್ನಾಕೆ ನಿದ್ದೆ ಮಾಡುವುದಿಲ್ಲ. ಯಾವ ಶಕ್ತಿಯೂ ಆಕೆಯನ್ನು ಬಗ್ಗಿಸಲಾರದು. ಏಕೆಂದರೆ, ಅದೋ ನೋಡಿ! ಮಹಾ ಕಾಳಿ ಮತ್ತೊಮ್ಮೆ ಎಚ್ಚೆತ್ತು ಉಸಿರೆಳೆದು ನಿಲ್ಲುತ್ತಿದ್ದಾಳೆ!"

ಸೋದರ ಸಂನ್ಯಾಸಿಗಳಿಗೆ ವಿವೇಕಾನಂದರು ಕೊಡುವ ಈ ಕರೆ ಅತ್ಯಂತ ಮನನೀಯವಾದುದು: "ಬಹುಜನರ ಹಿತಕ್ಕೆ, ಬಹುಜನರ ಸುಖಕ್ಕೆ ಸಂನ್ಯಾಸಿಯು ಬಾಳನ್ನು ಬಾಳಬೇಕು. ನರಳುವ ಲಕ್ಷಾಂತರ ದುಃಖಿಗಳನ್ನು ಸಂತೈಸಬೇಕು. ಗೋಳಿಡುವ ಮಾತೆಯರ ಕಂಬನಿಗಳನ್ನು ತೊಡೆಯಬೇಕು. ಪತಿತರಾದವರನ್ನು ಮೇಲೆತ್ತಬೇಕು. ಅಜ್ಞಾನಿಗಳಿಗೆ ಜ್ಞಾನದಾನ ಮಾಡಬೇಕು. ಜೀವರ ವ್ಯಾವಹಾರಿಕ ಮತ್ತು ಪಾರಮಾರ್ಥಿಕ ಯೋಗಕ್ಷೇಮಗಳಿಗಾಗಿ ಜ್ಞಾನಜ್ಯೋತಿಯನ್ನು ಪಸರಿಸುವುದಕ್ಕಾಗಿಯೆ ಜನ್ಮವೆತ್ತುವನು ಸಂನ್ಯಾಸಿ! ನೀವೂ ಎಚ್ಚರಗೊಳ್ಳಿ! ಇತರರನ್ನೂ ಎಚ್ಚರಗೊಳಿಸಿ! ಏಳಿ! ಮೇಲೇಳಿ! ಗುರಿ ದೊರಕುವವರೆಗೂ ನಿಲ್ಲಬೇಡಿ! ಮುಂದೆ ನುಗ್ಗಿ! ಉತ್ತಿಷ್ಠತ, ಜಾಗ್ರತ, ಪ್ರಾಪ್ಯ ವರಾನ್ ನಿಬೋಧತ!"

ಉಪನಿಷತ್ತುಗಳ ಬಗೆಗೆ ಸ್ವಾಮೀಜಿ ಕೊಡುವ ಹೋಲಿಕೆಯಿದು: ".... ಮುಂಜಾನೆ ಯಾರಿಗೂ ಕಾಣದೆ, ಯಾರ ಅರಿವಿಗೂ ಬಾರದ ಹಿಮಮಣಿ ಅತಿ ಸುಂದರವಾದ ಗುಲಾಬಿಯನ್ನು ಅರಳಿಸುವಂತೆ ಇದೆ." ಈ ರೂಪಕವೂ ಗಮನಾರ್ಹ: "ಅವರು ಕೊಂಬೆಯ ತುದಿಗಳನ್ನು ಮಾತ್ರ ಕಸಿಮಾಡಲು ಯತ್ನಿಸುತ್ತಿದ್ದಾರೆ. ನಾನು ಬೇರನ್ನು ಸಹ ಕಸಿಮಾಡಲು ಹವಣಿಸುತ್ತಿದ್ದೇನೆ." ಈ ದೃಷ್ಟಾಂತ ಎಷ್ಟು ಸ್ವೋಪಜ್ಞವಾಗಿದೆ! —"ನಾವು ನಮ್ಮ ಕಥೆಗಳಲ್ಲಿ ಕೇಳಿಲ್ಲವೆ — ಕೆಲವು ರಾಕ್ಷಸರ ಜೀವಗಳು ಪಕ್ಷಿಗಳಲ್ಲಿ ಅಡಗಿರುತ್ತವೆ; ಈ ಪಕ್ಷಿಗಳನ್ನು ಕೊಂದಲ್ಲದೆ ಆ ರಾಕ್ಷಸರಿಗೆ ಬೇರಾವ ವಿಧದಲ್ಲೂ ಸಾವಿಲ್ಲ ಎಂದು! ಜನಾಂಗದ ವಿಷಯದಲ್ಲೂ ಹೀಗೆಯೇ."

ಸ್ವಾಮಿ ವಿವೇಕಾನಂದರ ಬರಹ, ಉಪನ್ಯಾಸಗಳಲ್ಲಿ ಸೂತ್ರಪ್ರಾಯವಾದ ಉಕ್ತಿಗಳು ಅಸಂಖ್ಯ. ನಿದರ್ಶನಕ್ಕೆ : "ವಿಕಾಸವೇ ಬದುಕು, ಸಂಕುಚಿತತೆಯೇ ಸಾವು", "ಯಾರು ಇತರರಿಗಾಗಿ ಬದುಕುತ್ತಾರೋ ಅವರದು ಮಾತ್ರ ಬದುಕು. ಉಳಿದವರು ಬದುಕಿಯೂ ಸತ್ತಂತೆಯೇ!" ಹಾಸ್ಯಪ್ರಜ್ಞೆಯೂ ಸ್ವಾಮೀಜಿಯವರಲ್ಲಿ ಆಗಾಗ ಮಿನುಗುತ್ತದೆ; ಮನಂಬುಗುತ್ತದೆ.

ವಿವೇಕಾನಂದರು ಶುಷ್ಕ ವೇದಾಂತಿಯಲ್ಲ; ಅವರದು ಸರಸ

ವಾದ ಹೃದಯ. ಅದರಲ್ಲಿ ಸೌಂದರ್ಯಪ್ರಜ್ಞೆಗೆ ಕೊರತೆಯಿಲ್ಲ. ಜಗತ್ತಿನ ಹಲವು ಚೆಲುವುಗಳನ್ನು ಕಂಡು ಅವರು ನಲಿದಿದ್ದಾರೆ; ಅಲ್ಲಿ ಜಗದ್ಧಾತ್ರಿಯ ಮಹಿಮೆಯನ್ನು ಸಂದರ್ಶಿಸಿದ್ದಾರೆ; ತಮಗಾದ ಆನಂದವನ್ನು ವ್ಯಕ್ತಪಡಿಸಿದ್ದಾರೆ. ಅವರು ಕೊಟ್ಟಿರುವ ಗಂಗೆಯ ಚಿತ್ರವಿದು: "ಹೃಷೀಕೇಶದಲ್ಲಿರುವ ಗಂಗೆಯ ಚಿತ್ರ ನೆನಪಿದೆಯೇ? ಎಂತಹ ನಿರ್ಮಲ ನೀಲಾಭ ಸಲಿಲ! ಸುಳಿಗಳಿಂದ ತಪ್ಪಿಸಿಕೊಂಡು ಸುಳಿದಾಡುವ ಹೊಳೆಹೊಳೆಯುವ ಮೀನುಗಳು! ಆ ಅಪೂರ್ವ ಸುಸ್ವಾದ ಹಿಮ ಶೀತಲ ವಾರಿ! ಆ ಅದ್ಭುತವಾದ 'ಹರ! ಹರ! ಹರ!' ಎಂಬ ತರಂಗವಾಣಿ! ಆ ನೀರವಗಿರಿ ನಿರ್ಝರಗಳ 'ಹರ! ಹರ!ಹರ!' ಎಂಬ ಪ್ರತಿಧ್ವನಿ! ಆ ವಿಪಿನವಾಸ, ಆ ಮಧುಕರೀ ಭಿಕ್ಷೆ; ಆ ಗಂಗೆಯ ವಿಶಾಲ ವಕ್ಷಸ್ಥಳದಿಂದ ಮೇಲೆದ್ದಿರುವ ಸಣ್ಣ ಸಣ್ಣ ದ್ವೀಪಗಳಂತಹ ಬಂಡೆಗಳು! ಅವುಗಳ ಮೇಲೆ ಕುಳಿತು ಬೊಗಸೆ ಬೊಗಸೆಯಾಗಿ ನೀರೀಂಟುವ ದೃಶ್ಯ! ಅಲ್ಲಿಯ ಮತ್ಸ್ಯಗಳಿಗೆ ಎಷ್ಟು ದುರ್ಭರತೆ! ಆ ಗಂಗೆಯ ಪ್ರೀತಿ! ಆ ಗಂಗೆಯ ಮಹಿಮೆ! ಆ ಗಂಗೆಯ ವೈರಾಗ್ಯಪ್ರದ ಸ್ಪರ್ಶ!"

> ಸ್ವಾಮಿ ವಿವೇಕಾನಂದರು ಸ್ವತಃ ಚಂಡಮಾರುತ, ಜಲಪಾತ, ಕಡಲ ಮೊರೆತ, ಆಕಾಶದ ಔದಾರ್ಯಗಳ ಸಂಗಮವಾಗಿದ್ದರು. ಅವರ ಬದುಕೇ ಒಂದು ಭವ್ಯ ಕಲೆ, ಮಹಾಕಾವ್ಯ !

ಸ್ವಾಮೀಜಿಯ ಸೌಂದರ್ಯೋಪಾಸನೆಗೆ ಇನ್ನೊಂದು ನಿದರ್ಶನ: ಒಮ್ಮೆ ಹಡಗಿನ ಮೇಲೆ ಅವರು ಅಡ್ಡಾಡುತ್ತಿದ್ದಾಗ, ಬೆಳದಿಂಗಳು ಹಬ್ಬಿದ ಕಡಲು ಆಗಸಗಳನ್ನು ದಿಟ್ಟಿಸುತ್ತ, "ಮಾಯೆಯ ರಾಜ್ಯದಲ್ಲಿರುವ ಈ ದೃಶ್ಯಾವಳಿಗಳೇ ಇನಿತು ಸುಂದರವಾಗಿರುವಾಗ ಮಾಯೆಯ ಹಿಂದಿರುವ ಆ ಸತ್ಯಸ್ವರೂಪ ಇನ್ನೆಷ್ಟು ಸುಂದರತರವಾಗಿರಬೇಕು!" ಎಂದು ವಿಸ್ಮಯಪಟ್ಟರಂತೆ. ಮತ್ತೊಮ್ಮೆ ಅಂಥದೇ ಚಂದ್ರಿಕಾರಜನಿಯ ಸೌಂದರ್ಯಕ್ಕೆ ಪರವಶರಾಗಿ, ಒಳಗೆ ಕವಿತೆಯೋದುತ್ತಿದ್ದ ಶಿಷ್ಯರನ್ನು ಕರೆದು, "ಕವಿತೆಯ ಸಾರವೇ ಸಮ್ಮುಖದಲ್ಲಿ ಚೆಲ್ಲಿ ಸೂಸುತ್ತಿರುವಾಗ ಒಳಗೆ ಕುಳಿತು ಕವಿತೆಯೋದುವುದರಿಂದ ಪ್ರಯೋಜನವೇನು?" ಎಂದರಂತೆ.

"ಶೀಲದಂತೆ ಶೈಲಿ", "ವ್ಯಕ್ತಿತ್ವದ ಪ್ರತಿಬಿಂಬವೇ ಶೈಲಿ" ಮುಂತಾದ ಹೇಳಿಕೆಗಳು ಸ್ವಾಮೀಜಿಯ ಶೈಲಿಗೆ ಸಮರ್ಪಕವಾಗಿ ಒಪ್ಪುತ್ತವೆ. ಅವರ ಔನ್ನತ್ಯ, ಅತೀವ ಪ್ರಾಮಾಣಿಕತೆ, ಕಳಕಳಿಗಳು ಅವರ ಕೃತಿಗಳಲ್ಲಿ ಅನುಸ್ಯೂತವಾಗಿ ಎದ್ದು ಕಾಣುತ್ತವೆ. "ಏಕಾಗ್ರತೆಯೇ ನನ್ನ ಯಶಸ್ಸಿನ ಗುಟ್ಟು" ಎಂದು ಒಂದೆಡೆ ಹೇಳುತ್ತಾರೆ, ಸ್ವಾಮೀಜಿ. ಅವರ ಉಕ್ತಿ, ಅಭಿವ್ಯಕ್ತಿಗಳಿಗೆ ಕಾವ್ಯಗುಣವನ್ನು ತಂದುಕೊಟ್ಟಿರುವುದು ಆ ಏಕಾಗ್ರತೆಯೇ. ಅದೇ ತಪಸ್ಸು; ವಾಙ್ಮಯ ತಪಸ್ಸು ಅದರ ಒಂದು ಅಂಗ.

ಕೇವಲ ಮೂವತ್ತೊಂಬತ್ತು ವರ್ಷಗಳ ಅವಧಿಯಲ್ಲಿ ಸಾಮಾನ್ಯರ ಊಹೆಗೂ ನಿಲುಕದಂಥ ಸಾಧನೆಗಳನ್ನು ಸ್ವಾಮೀಜಿ ಮಾಡಿದರಲ್ಲ, ಅವರ ಬದುಕಿನ ಗುರಿಯೇನು? "ನಿಮ್ಮಲ್ಲಿ ಒಂದು ತುಮುಲವನ್ನೆಬ್ಬಿಸುವುದೇ ನನ್ನ ಜೀವನಧ್ಯೇಯ!" (My mission iin life is to rouse a struggle in you) ಎಂದು ಅವರೇ ಹೇಳಿಕೊಂಡಿದ್ದಾರೆ. (ಧರ್ಮ, ಕಲೆ ಸಾಹಿತ್ಯ ಎಲ್ಲವೂ ಮಾಡಬಹುದಾದ ಕೆಲಸ ಇಷ್ಟೆ ಎನಿಸುತ್ತದೆ.)

ಒಂದು ಬಿರುಗಾಳಿಯನ್ನೆಬ್ಬಿಸುವುದೂ ಸ್ವಾಮಿ ವಿವೇಕಾನಂದರ ಉದ್ದೇಶವಾಗಿತ್ತು. ಸ್ವತಃ ಅವರು ಚಂಡಮಾರುತ, ಜಲಪಾತ, ಕಡಲ ಮೊರೆತ, ಆಕಾಶದ ಔದಾರ್ಯಗಳ ಸಂಗಮವಾಗಿದ್ದರು. ಅವರ ಬದುಕೇ ಒಂದು ಭವ್ಯ ಕಲೆ, ಮಹಕಾವ್ಯ!

*(ಈ ಲೇಖನದಲ್ಲಿ ಉದ್ಧೃತವಾಗಿರುವ ಸ್ವಾಮೀಜಿಯ ಉಕ್ತಿಗಳ ಭಾಷಾಂತರ ಬಹುತೇಕ ಕುವೆಂಪು ಅವರದು.)*

**ಸುಮಾರು ಎರಡು ಗಂಟೆಗಳ ಕಾಲ ವಿವೇಕಾನಂದರು ಮಾನವ ಮತ್ತು ದೇವರಿಗೆ ಸಂಬಂಧಪಟ್ಟ ತಾತ್ತ್ವಿಕ ವಿಷಯವಾಗಿ ರಮ್ಯವಾದ ವಾಗ್‌ಜಾಲವನ್ನು ನೆಯ್ದರು. ಅವರ ಉಪನ್ಯಾಸ ಎಷ್ಟು ತರ್ಕಬದ್ಧವಾಗಿತ್ತು ಎಂದರೆ ಅದರ ಮುಂದೆ ವಿಜ್ಞಾನವೂ ಸಾಮಾನ್ಯ ವಿಷಯವಾಗಿ ಕಂಡುಬಂದಿತು.ಅವರು ತರ್ಕಬದ್ಧವಾದ ಒಂದು ಸುಂದರ ವಸ್ತ್ರವನ್ನೇ ಹಣೆದಿದ್ದರು. ಅವರ ದೇಶದಲ್ಲಿ ಕೈಮಗ್ಗದಿಂದ ಮಾಡಿದ, ವಿವಿಧ ಬಣ್ಣಗಳಿಂದ ಕೂಡಿದ, ಅತ್ಯಂತ ಮೋಹಕವಾದ, ಪೌರಸ್ತ್ಯ ಸುವಾಸನೆಯಿಂದ ಕೂಡಿದ ವಸ್ತ್ರದಂತೆ ಅವರ ಉಪನ್ಯಾಸವು ವರ್ಣರಂಜಿತವಾಗಿದ್ದು ಆಕರ್ಷಣೀಯವಾಗಿತ್ತು, ಮತ್ತು ಮನನ ಮಾಡಲು ತೃಪ್ತಿಕರವಾಗಿತ್ತು. ಈ ಕಂದು ಬಣ್ಣದ ವ್ಯಕ್ತಿ, ಚಿತ್ರಕಾರನು ಬಣ್ಣವನ್ನು ಉಪಯೋಗಿಸುವಂತೆ ಕಾವ್ಯಮಯವಾದ ರೂಪಕಗಳನ್ನು ಉಪಯೋಗಿಸುವರು. ಎಲ್ಲಿ ಬಣ್ಣವನ್ನು ಬಳಿಯಬೇಕೋ ಅಲ್ಲಿ ಅದನ್ನು ಹಚ್ಚುವರು. ಪರಿಣಾಮವಾಗಿ ಅಲ್ಲಿ ಒಂದು ವಿಚಿತ್ರವಾದ ಆಕರ್ಷಣೆಯಿತ್ತು. ವೇಗವಾಗಿ ಒಂದಾದ ಮೇಲೊಂದರಂತೆ ಬರುತ್ತಿದ್ದ ತರ್ಕಬದ್ಧವಾದ ನಿರ್ಣಯಗಳು ವಿವಿಧಾಕಾರದಲ್ಲಿ, ವಿವಿಧ ಬಣ್ಣಗಳಲ್ಲಿ ಹೊಳೆಯುವ ಗಾಜಿನ ಮಣಿಗಳಂತೆ ಕಂಗೊಳಿಸುತ್ತಿದ್ದವು. ಉಪನ್ಯಾಸಕರ ಅದ್ಭುತ ಕೌಶಲ್ಯಕ್ಕೆ ತಕ್ಕ ಪ್ರತಿಫಲವೋ ಎಂಬಂತೆ ಉತ್ಸಾಹ ಪೂರ್ಣವಾದ ಕರತಾಡನಗಳು ಸಭಿಕರಿಂದ ಬರುತ್ತಿದ್ದವು.** *–ಡೆಟ್ರಾಯ್ಟ್ ಫ್ರೀ ಪ್ರೆಸ್* (Detroit Free Press)